SRI DEVARAJ URS ACADEMY OF HIGHER EDUCATION & RESEARCH
SRI DEVARAJ URS MEDICAL COLLEGE
Tamaka, Kolar

SDUAHER

UNIVERSITY LIBRARY & LEARNING RESOURCE CENTRE

Online Newspaper Clipping Service

THE NEW INDIAN EXPRESS

Dtd-Tuesday, 17th, July- 2018

Page No. 08

# Proposal to have organ retrieval centre at NIMHANS in cold storage

SURAKSHA P @Bengaluru

AT a time when Karnataka is trailing neighbouring Southern states in organ donation, a proposal to set up organ retrieval centres at district hospitals and at NIMHANS to boost organ donation has been in cold storage for a year. One donor can save eight lives.

"NIMHANS that receives maximum accident and trauma cases, which are potential brain dead donors, has estimated ₹4.5 crore that will be needed to set up such a centre. Though it's a Central government hospital, the state had agreed to give money for setting up the centre. But no allocations have been made so far," said Dr T S Prabhakar, Joint Director, Medical, Department of Health and Family Welfare.

A brain dead patient can have his heart, two kidneys, two lungs, liver, pancreas, and small bowel reused by patients with organ failure, whose lives can be saved. The fact that out of 52 organ donations this year, 41 are from medico-legal cases and only 11 are from non-medico legal cases reiterates the reality that majority of organ donations happen from accident victims.

"When there is no space to treat the living, how can we maintain the dead? Organ retrieval centres require neurologists, anaesthetists, physicians and a medical superintendent apart from Operation Theatre space and an Intensive Care Unit. We already have a lot of vacancies for our specialists' posts. We need additional human resource for organ retrieval and money for their salaries," Prabhakar added.

The Non-Transplant Human Organ Retrieval Centre (NTHORC) proposal was first made in August 2017 during former Health Minister KR Ramesh Kumar's tenure. Despite the health department receiving Rs 495 crore additional budget — up from ₹8,822 crore of former CM Siddaramaiah's budget — this proposal finds no mention.


"A grant of ₹30 crore will be earmarked for transplantation of heart, kidney, liver etc., for poor patients," announced HD Kumaraswamy in his budget speech.

"This announcement has nothing to do with grants for this project, this money is to be given individually to patients getting transplants done, for their medical expenses," Prabhakar said.

Dr Kishore Phadke, convener, Jeevasarthakathe, the state transplant body, said, "We have had 52 donations in seven months so far already. Last year, for the entire year, we had 70 donations, so the number has definitely gone up. Lot of multi-organ donations are also taking place and transplant activity is happening in other parts of the state too apart from Bengaluru."

"But we need more transplant coordinators. At present we have only five and we need more hospitals to apply to become organ retrieval centres. District hospitals have tremendous potential and so does NIMHANS. This will boost organ donation and we can surpass our neighbouring states," he added.

Organ donation rate per million population is less than one in Karnataka. NIMHANS Director Dr BN Gangadhar and Health Secretary Ajay Seth were unavailable for comment.



**ORGAN DONATIONS SO FAR IN 2018**

| | |
|---|---|
| Telangana | 92 |
| Tamil Nadu | 80 |
| Maharashtra | 73 |
| Karnataka | 52 |

> We need additional human resource for organ retrieval
>
> Dr T S Prabhakar, Dept of Health and Family Welfare

**ORGAN DONATION WAITING LIST**

| | |
|---|---|
| Heart | 59 |
| Heart and lungs | 11 |
| Kidney | 2,342 |
| Kidney and pancreas | 12 |
| Liver | 946 |
| Liver and kidney | 8 |
| Small bowel | 1 |

# CBSE moves SC against Madras HC NEET order

TIMES NEWS NETWORK

**New Delhi:** The Central Board of Secondary Education on Monday moved the Supreme Court challenging the Madras high court order directing it to award compensatory marks to students who wrote NEET (National Eligibility cum Entrance Test) in Tamil.

**ROW OVER GRACE MARKS**

Last week, the HC had ordered CBSE to grant 196 marks — four marks each for 49 "erroneous" questions — in the Tamil version of this year's NEET and directed the board to revise the merit list. The NEET results were published in the first week of June and the counselling process is underway. In Tamil Nadu, about 1.07 lakh candidates took the test across 170 centres in 10 cities and any revision in the merit list would affect thousands of students who have already taken admission in various medical colleges.

Challenging the verdict, the CBSE contended that the HC erred in passing the order and urged the apex court to immediately stay its operation as it would alter the entire admission process in medical colleges. The petition was filed by advocate Tara Chandra Sharma and the board submitted that the most appropriate answer was decided by experts and marks were awarded based on that. There were 180 questions with total marks of 720 in the NEET. The HC had said the students who took the exam for admission to medical and dental colleges in Tamil should be suitably compensated to provide a level playing ground.

ಸಂಯುಕ್ತ ಕರ್ನಾಟಕ



# ಸೊನ್ನೆ ಅಂಕಕ್ಕೂ ಸಿಕ್ತು ಮೆಡಿಕಲ್ ಸೀಟು

ನವದೆಹಲಿ: ವೈದ್ಯಕೀಯ ಕ್ಷೇತ್ರದ ಮತ್ತೊಂದು ಕರಾಳತೆ ಬಯಲಾಗಿದೆ. ಪರೀಕ್ಷೆಯಲ್ಲಿ ಸೊನ್ನೆ ಅಂಕ ಪಡೆದವರು ಸೀಟು ಗಿಟ್ಟಿಸಿದ್ದಾರೆ. ಹಾಗಾಗಿ ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿನ 2017ರ ಪ್ರವೇಶ ಪ್ರಕ್ರಿಯೆ ಇದೀಗ ಭಾರೀ ಸಂಶಯಕ್ಕೆ ಕಾರಣವಾಗಿದೆ.

ನೀಟ್ ಪರೀಕ್ಷೆ ಬರೆದವರ ಪೈಕಿ ಸುಮಾರು 400 ಮಂದಿ ಭೌತಶಾಸ್ತ್ರ ಹಾಗೂ ರಸಾಯನ ಶಾಸ್ತ್ರ ವಿಷಯದಲ್ಲಿ ಒಂದಂಕಿಯ ಮಾರ್ಕ್ಸ್ ಪಡೆದುಕೊಂಡಿದ್ದು, 110 ಮಂದಿ ಶೂನ್ಯ ಹಾಗೂ ನೆಗೆಟಿವ್ ಅಂಕ ಪಡೆದುಕೊಂಡಿದ್ದಾರೆ.

ಹಾಗಿದ್ದೂ ವೈದ್ಯಕೀಯ ಕಾಲೇಜಿನಲ್ಲಿ ಪ್ರವೇಶ ಪಡೆದುಕೊಂಡಿದ್ದಾರೆ. ಪ್ರಮುಖ ವಿಷಯದಲ್ಲಿ ಕಡಿಮೆ ಅಂಕ ಗಳಿಸಿದರೂ ಪ್ರವೇಶ ಪಡೆಯುವುದಕ್ಕೆ ಅರ್ಹತೆ ಸಿಕ್ಕುತ್ತದೆ ಎಂದಾದರೆ, ಪರೀಕ್ಷೆ ಏಕೆ ಎಂಬ ಪ್ರಶ್ನೆ ಮೂಡಿದೆ.

ಪ್ರತಿ ವಿಷಯದಲ್ಲಿ ಕನಿಷ್ಠ ಶೇ.50 ಅಂಕಗಳಿಸುವುದು ಕಡ್ಡಾಯ ಎಂದು ನೀಟ್ ಅಧಿಸೂಚನೆ ಹೇಳುತ್ತದೆ. 2017ರಲ್ಲಿ ಒಟ್ಟಾರೆ 1990 ವಿದ್ಯಾರ್ಥಿಗಳು ನೀಟ್ ಬರೆದಿದ್ದು 720 ಮಂದಿ ಕನಿಷ್ಠ ಅಂಕ 150ಕ್ಕಿಂತ ಕಡಿಮೆ ಗಳಿಸಿದ್ದಾರೆ.



- ನೀಟ್ ಪರೀಕ್ಷೆಯಲ್ಲಿ 110 ಮಂದಿಗೆ ಶೂನ್ಯ
- ಎರಡಂಕಿ ತಲುಪದ 530 ಪರೀಕ್ಷಾರ್ಥಿಗಳು
- ಬಯಲಾದ ಕ್ಯಾಪಿಟೇಶನ್ ಶುಲ್ಕದ ಪ್ರಭಾವ

ಅನರ್ಹ ಅಂಕಾಧಿಪತಿ 507 ವಿದ್ಯಾರ್ಥಿಗಳಿಗೆ ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಸೀಟು ಲಭ್ಯವಾಗಿದ್ದು, ಬಹುತೇಕ ಮಂದಿ ಶ್ರೀಮಂತ ವರ್ಗದಿಂದ ಬಂದವರಾಗಿರುವುದು ಗಮನಾರ್ಹ

ಇನ್ನೂ ಹುಟ್ಟದ ಉನ್ನತ ವಿದ್ಯಾಸಂಸ್ಥೆಯು ಕೇಂದ್ರ ಸರ್ಕಾರಕ್ಕೆ ಉತ್ಕೃಷ್ಟವಂತೆ; ಏನೀ ಕತೆ?

# ಬಿಕ್ಕಟ್ಟು ಹಾಗೇ ಬಿಟ್ಟು ವಿಶ್ವಮಾನ್ಯತೆಗೆ ಪಟ್ಟು



ಅನುರಣನ

ನಾರಾಯಣ ಎ.

ಇವೆಲ್ಲಾ ಸುಲಭದಲ್ಲಿ ಅರ್ಥ ಮಾಡಿಕೊಳ್ಳಬಹುದಾದ ಬೆಳವಣಿಗೆಗಳಲ್ಲ. ಹೋದ ವಾರ ಕೇಂದ್ರ ಸರ್ಕಾರ ಕೆಲ ಉನ್ನತ ಶಿಕ್ಷಣ ಸಂಸ್ಥೆಗಳಿಗೆ 'ಉತ್ಕೃಷ್ಟ ಸಂಸ್ಥೆಗಳು' ಎಂಬ ಸ್ಥಾನಮಾನ ನೀಡಿಬಿಟ್ಟಿತು. ಆಗಲಿ, ಸಂತೋಷ. ಯಾವ್ಯಾವ ಸಂಸ್ಥೆಗಳಿಗೆ ಈ ಬಿರುದು ಸಿಕ್ಕಿದೆ ಅಂತ ನೋಡಿದರೆ ಅಲ್ಲಿತ್ತು ಆಶ್ಚರ್ಯದ ವಿಷಯ. ಉತ್ಕೃಷ್ಟ ಎನ್ನುವ ಬಿರುದು ಪಡೆದ ಸಂಸ್ಥೆಗಳ ಪೈಕಿ ಒಂದು ಖಾಸಗಿ ಸಂಸ್ಥೆ ಇನ್ನೂ ಅಸ್ತಿತ್ವಕ್ಕೇ ಬಂದಿಲ್ಲ. ಈ ಉದ್ದೇಶಿತ ಸಂಸ್ಥೆಯ ಉದ್ದೇಶಿತ ಹೆಸರು 'ಜಿಯೊ ಇನ್‌ಸ್ಟಿಟ್ಯೂಟ್' ಅಂತ. ಜಿಯೊ ಅಂದರೆ ತಿಳಿಯಿತಲ್ಲ. ಜಿಯೊ ಫೋನನ್ನು ದೇಶದ ಕೈಗಿತ್ತ ಅದೇ ರಿಲಯನ್ಸ್ ಸಮೂಹ ಈ ಹೊಸ ಉನ್ನತ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಹೊರಟಿದೆ. ಪ್ರಸ್ತಾಪಿತ ಸಂಸ್ಥೆಯ ಒಂದೇ ಒಂದು ಸ್ತಂಭವೂ ಇನ್ನೂ ಎದ್ದು ನಿಲ್ಲುವ ಮೊದಲೇ ಕೇಂದ್ರ ಸರ್ಕಾರ ಅದನ್ನು ರಾಷ್ಟ್ರೀಯ ಮಹತ್ವದ ಸಂಸ್ಥೆ ಅಂತ ಘೋಷಿಸಿದೆ. ಕೂಸು ಹುಟ್ಟುವ ಮುನ್ನವೇ ಕುಲಾವಿ ಹೊಲಿಸಿದ್ದು ಮಾತ್ರವಲ್ಲ, ಪದವಿಯನ್ನೂ ನೀಡಿದ ಕತೆ ಇದು.

ತನ್ನ ನಡೆಯನ್ನು ಸರ್ಕಾರ ಸಹಜವಾಗಿಯೇ ಬಲವಾಗಿ ಸಮರ್ಥಿಸಿಕೊಂಡಿದೆ. ಮುಕೇಶ್ ಅಂಬಾನಿ ನೇತೃತ್ವದ ರಿಲಯನ್ಸ್ ಸಮೂಹ ಸಂಸ್ಥೆಗಳ ಬಳಿ ಧನವಿದೆ, ಭೂಮಿಯಿದೆ, ಛಲವಿದೆ ಎಂಬುದನ್ನು ಉನ್ನತ ಮಟ್ಟದ ಸಮಿತಿಯೊಂದು ಪರಿಶೀಲಿಸಿದ ನಂತರವೇ ಜಿಯೊ ಸಂಸ್ಥೆಗೆ ಈ ಬಿರುದು ನೀಡಲಾಗಿದೆ; ಇದರಲ್ಲಿ ತಪ್ಪೇನಿಲ್ಲ ಅಂದಿದೆ. ಸಮರ್ಥನೆಗೇನು ಬರ? ಈ ದೇಶದಲ್ಲಿ ಏನನ್ನಾದರೂ ಸಮರ್ಥಿಸಿಕೊಳ್ಳಬಹುದು. ಅದ್ಯಾವ ಸಮರ್ಥನೆ ನೀಡಿದರೂ ಅಸ್ತಿತ್ವದಲ್ಲೇ ಇಲ್ಲದ ಸಂಸ್ಥೆಯೊಂದಕ್ಕೆ ಸರ್ಕಾರ ಈ ರೀತಿ ಅಧಿಕೃತ ಸ್ಥಾನವೊಂದನ್ನು ನೀಡುವುದು ತೀರಾ ವಿಚಿತ್ರವಾಗಿದೆ. ಹಣ ಮತ್ತು ಭೂಮಿ ಇದ್ದಾಕ್ಷಣ ಒಂದು ಉನ್ನತ ಶಿಕ್ಷಣ ಸಂಸ್ಥೆಯು ಉತ್ಕೃಷ್ಟ ಸಂಸ್ಥೆಯಾಗಿಬಿಡುತ್ತದೆ ಎನ್ನುವ ಯೋಚನೆಯೇ ಸಮಸ್ಯಾತ್ಮಕ. ಈ ಸಮೂಹದವರು ಈಗಾಗಲೇ ನಡೆಸುತ್ತಿರುವ ಸಂಸ್ಥೆಗಳು ಜಾಗತಿಕ ಮಟ್ಟದಲ್ಲಿರಲಿ, ದೇಶದೊಳಗೂ ಯಾವುದೇ ಗುಣಮಟ್ಟದ ಸಂಚಲನ ಸೃಷ್ಟಿಸಿಲ್ಲ. ಆದುದರಿಂದ ಕೇಂದ್ರ ಸರ್ಕಾರದ ಈ ನಿರ್ಧಾರದ ಹಿಂದೆ-ಮುಂದೆ ಹುಟ್ಟಿಕೊಳ್ಳುವ ಪ್ರಶ್ನೆಗಳು ಉನ್ನತ ಶಿಕ್ಷಣ ರಂಗದಲ್ಲಿ ದೇಶದ ಆದ್ಯತೆಗಳೆಲ್ಲಾ ಹೇಗೆ ಬುಡಮೇಲಾಗುತ್ತಿವೆ ಎನ್ನುವುದನ್ನು ಸ್ಪಷ್ಟವಾಗಿ ಸಾರುತ್ತಿವೆ.

ಅಷ್ಟಕ್ಕೂ ರಿಲಯನ್ಸ್ ಸಮೂಹದವರಿಗೆ ತಮ್ಮ ಉದ್ದೇಶಿತ ಸಂಸ್ಥೆಗೆ ಈ ರೀತಿ ವಿವಾದಾತ್ಮಕವಾದ ಒಂದು ಪಟ್ಟವನ್ನು ಸರ್ಕಾರದಿಂದ ಪಡೆದುಕೊಳ್ಳುವ ಅಗತ್ಯವಾದರೂ ಏನಿತ್ತು? ಇಡೀ ಬೆಳವಣಿಗೆಯ ಮಹತ್ವ ಇರುವುದೇ ಈ ಪ್ರಶ್ನೆಯಲ್ಲಿ. ಖಾಸಗಿ ಸಂಸ್ಥೆಯೊಂದು ಕೇಂದ್ರ ಸರ್ಕಾರದಿಂದ ಒಮ್ಮೆ ಈ ಸ್ಥಾನಮಾನ ಪಡೆದುಕೊಂಡುಬಿಟ್ಟರೆ ಮತ್ತೆ ಅಂತಹ ಸಂಸ್ಥೆಗಳು ಯಾವುದೇ ರೀತಿಯಲ್ಲಿ ಸರ್ಕಾರಿ ನಿಯಂತ್ರಣಕ್ಕೆ ಒಳಪಡುವುದಿಲ್ಲ. ಸರ್ಕಾರಿ ಸ್ವಾಮ್ಯದ ನಿಯಂತ್ರಣ ಸಂಸ್ಥೆಗಳಾದ ಯುಜಿಸಿ (ಅದನ್ನೀಗ ಉನ್ನತ ಶಿಕ್ಷಣ ನಿಯಂತ್ರಣ ಆಯೋಗ ಅಂತ ಬದಲಾಯಿಸುತ್ತಿದ್ದಾರೆ), ಎಂಸಿಐ, ಎಐಸಿಟಿಇ ಮೊದಲಾದ ಯಾವುದೇ ನಿಯಂತ್ರಣ ಮಂಡಳಿಗಳಿಗೂ ಇಂತಹ ಸಂಸ್ಥೆಗಳ ಮೇಲೆ ಯಾವುದೇ ನಿಗಾ ಇರುವುದಿಲ್ಲ. ಒಮ್ಮೆ ಒಂದು ಸಂಸ್ಥೆ 'ಉತ್ಕೃಷ್ಟ ಸಂಸ್ಥೆ' ಅಂತ ಸರ್ಕಾರದಿಂದ ಹೆಸರಿಸಿಕೊಂಡರೆ ಮುಗಿಯಿತು. ಆ ನಂತರ ಅದು ಸಂಪೂರ್ಣ ಸ್ವಾಯತ್ತ ಸಂಸ್ಥೆಯಾಗುತ್ತದೆ. ವಿದ್ಯಾರ್ಥಿಗಳ ನೇಮಕದಿಂದ ಹಿಡಿದು, ಶಿಕ್ಷಕರ ನೇಮಕದಿಂದ ಹಿಡಿದು, ಪಠ್ಯಕ್ರಮ, ಪರೀಕ್ಷೆ ಹೀಗೆ ಎಲ್ಲದರಲ್ಲೂ ಅವು ಸರ್ವತಂತ್ರ ಸ್ವತಂತ್ರ ಸಂಸ್ಥೆಗಳಾಗುತ್ತವೆ.

ಸರ್ಕಾರಿ ನಿಯಂತ್ರಣದಿಂದ ಹೊರಬರಬೇಕು ಎನ್ನುವ ಉದ್ದೇಶದಿಂದ ಖಾಸಗಿ ಸಂಸ್ಥೆಗಳು ವಿವಿಧ ಒತ್ತಡ ಹೇರುತ್ತಿರುವುದಕ್ಕೆ ಒಂದು ಇತಿಹಾಸವೇ ಇದೆ. ಇದರ ಪರಿಣಾಮವಾಗಿ ಕೆಲ ಸಂಸ್ಥೆಗಳಿಗೆ ಸ್ವಾಯತ್ತ ಅಂತ ನೀಡುವ




ಪರಿಪಾಟ ಪ್ರಾರಂಭವಾಗಿ ಬಹಳ ಸಮಯವಾದರೂ, ಒಂದಲ್ಲ ಒಂದು ರೀತಿಯಲ್ಲಿ ಸರ್ಕಾರದ ನಿಯಂತ್ರಣ ಮುಂದುವರಿದೇ ಇತ್ತು. ಈಗ ಯುಜಿಸಿಯನ್ನು ಮುರಿದು ಕಟ್ಟಿ ಉನ್ನತ ಶಿಕ್ಷಣ ನಿಯಂತ್ರಣ ಪ್ರಾಧಿಕಾರ ಅಂತ ಸರ್ಕಾರ ಸ್ಥಾಪಿಸಹೊರಟಿರುವುದು ಕೂಡ ಬೇರೆ ಬೇರೆ ರೀತಿಯಲ್ಲಿ ಖಾಸಗಿ ಮತ್ತು ಸರ್ಕಾರಿ ಉನ್ನತ ಸಂಸ್ಥೆಗಳನ್ನು ತನ್ನ ತಾಳಕ್ಕೆ ತಕ್ಕ ಹಾಗೆ ಕುಣಿಯುವಂತೆ ಮಾಡಬೇಕು ಎನ್ನುವ ಅದೇ ಉದ್ದೇಶದಿಂದ. ಹಾಗಿರುವಾಗ ಇದ್ದಕ್ಕಿದ್ದಂತೆಯೇ ಕೆಲ ಸಂಸ್ಥೆಗಳನ್ನು ಸರ್ಕಾರದ ನಿಯಂತ್ರಣದಿಂದ ಪೂರ್ಣವಾಗಿ ಹೊರಗಿಡುವ ಈ ಯೋಚನೆ ಕೇಂದ್ರ ಸರ್ಕಾರಕ್ಕೆ ಬಂದದ್ದಾದರೂ ಯಾಕೆ? ಈ ಪ್ರಶ್ನೆಯ ಜಾಡು ಹಿಡಿದು ಹೋದರೆ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಸರ್ಕಾರ ಆಡುತ್ತಿರುವ ಹಲವು ಆಟಗಳ ಪರಿಚಯವಾಗುತ್ತದೆ.

ದೇಶದ ಯಾವುದೇ ಉನ್ನತ ಶಿಕ್ಷಣ ಸಂಸ್ಥೆಯು ಜಾಗತಿಕ ಮಟ್ಟದ ಶ್ರೇಷ್ಠ 500 ಸಂಸ್ಥೆಗಳ ಪೈಕಿ ಸ್ಥಾನ ಪಡೆದಿಲ್ಲ ಎಂಬ ವಿಷಯವೊಂದು ಬಹಳ ಕಾಲದಿಂದ ಆಗಾಗ ಪ್ರಸ್ತಾಪವಾಗುತ್ತಲೇ ಇದೆ. ಈಗಿನ ಕೇಂದ್ರ ಸರ್ಕಾರ ಈ ವಿಚಾರವನ್ನು ಬಹಳ ಗಂಭೀರವಾಗಿ ಪರಿಗಣಿಸಿದೆಯಂತೆ. ಹೇಗಾದರೂ ಮಾಡಿ ಕೆಲವು ಭಾರತೀಯ ಸಂಸ್ಥೆಗಳಾದರೂ ಜಾಗತಿಕ ಮಟ್ಟದಲ್ಲಿ ಗುರುತಿಸಲ್ಪಡಬೇಕು ಎನ್ನುವ ಸಂಕಲ್ಪ ಮಾಡಿದೆಯಂತೆ. ಅದಕ್ಕೆ ಅನುಗುಣವಾಗಿ ಒಂದು ಸಮಿತಿಯನ್ನು ನೇಮಿಸಿ 10 ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ ಮತ್ತು 10 ಖಾಸಗಿ

**ಸರ್ಕಾರಿ ನಿಯಂತ್ರಣದಿಂದ ಹೊರಬರಬೇಕು ಎನ್ನುವ ಉದ್ದೇಶದಿಂದ ಖಾಸಗಿ ಸಂಸ್ಥೆಗಳು ವಿವಿಧ ಒತ್ತಡ ಹೇರುತ್ತಿರುವುದಕ್ಕೆ ಒಂದು ಇತಿಹಾಸವೇ ಇದೆ. ಇದರ ಪರಿಣಾಮವಾಗಿ ಕೆಲ ಸಂಸ್ಥೆಗಳಿಗೆ ಸ್ವಾಯತ್ತತೆ ನೀಡುವ ಪರಿಪಾಟ ಪ್ರಾರಂಭವಾಗಿ ಬಹಳ ಸಮಯವಾದರೂ, ಒಂದಲ್ಲ ಒಂದು ರೀತಿಯಲ್ಲಿ ಸರ್ಕಾರದ ನಿಯಂತ್ರಣ ಮುಂದುವರಿದೇ ಇತ್ತು. ಈಗ ಯುಜಿಸಿಯನ್ನು ಮುರಿದು ಕಟ್ಟಿ ಉನ್ನತ ಶಿಕ್ಷಣ ನಿಯಂತ್ರಣ ಪ್ರಾಧಿಕಾರ ಅಂತ ಸರ್ಕಾರ ಸ್ಥಾಪಿಸಹೊರಟಿರುವುದು ಕೂಡ ಬೇರೆ ಬೇರೆ ರೀತಿಯಲ್ಲಿ ಖಾಸಗಿ ಮತ್ತು ಸರ್ಕಾರಿ ಉನ್ನತ ಸಂಸ್ಥೆಗಳನ್ನು ತನ್ನ ತಾಳಕ್ಕೆ ತಕ್ಕ ಹಾಗೆ ಕುಣಿಯುವಂತೆ ಮಾಡಬೇಕು ಎನ್ನುವ ಅದೇ ಉದ್ದೇಶದಿಂದ**

ಸಂಸ್ಥೆಗಳಿಗೆ ಉತ್ಕೃಷ್ಟ ಸಂಸ್ಥೆಗಳು ಎನ್ನುವ ಬಿರುದು ನೀಡಿ ಅವುಗಳನ್ನು ವಿಶ್ವಮಟ್ಟಕ್ಕೆ ಬೆಳೆಸಲು ಪ್ರೇರೇಪಣೆ ನೀಡುವುದು ಉದ್ದೇಶ. ಸರ್ಕಾರಿ ಸಂಸ್ಥೆಗಳಿಗೆ ಸ್ವಾಯತ್ತತೆಯ ಜತೆಗೆ ₹ 1000 ಕೋಟಿ ಅನುದಾನವೂ ಇದೆ. ಖಾಸಗಿ ಸಂಸ್ಥೆಗಳಿಗೆ ಅನುದಾನವಿಲ್ಲ. ಕೇವಲ ಸ್ವಾಯತ್ತತೆ ಮಾತ್ರ.

ಈ ಲೆಕ್ಕಾಚಾರದ ಪ್ರಕಾರ ಯೋಚಿಸಿದರೆ ಭಾರತೀಯ ಸಂಸ್ಥೆಯೊಂದು ಜಾಗತಿಕ ಮಟ್ಟದಲ್ಲಿ ಬೆಳೆಯಬೇಕಾದರೆ ಅದು ಸರ್ಕಾರದ ನಿಯಂತ್ರಣದಿಂದ ಹೊರಬರಬೇಕು ಎಂದು ಸರ್ಕಾರವೇ ಒಪ್ಪಿಕೊಂಡ ಹಾಗೆ ಆಗಿದೆ. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಭಾರತೀಯ ಉನ್ನತ ಶಿಕ್ಷಣ ಸಂಸ್ಥೆಗಳ ಬೆಳವಣಿಗೆಗೆ ಸರ್ಕಾರದ ನಿಯಂತ್ರಣವೇ ಮಾರಕ ಅಂತ ಸರ್ಕಾರ ಒಪ್ಪಿಕೊಂಡಿದೆ. ಸರ್ಕಾರದ ನಿಯಂತ್ರಣವು ಉನ್ನತ ಶಿಕ್ಷಣಕ್ಕೆ ಅಷ್ಟೊಂದು ಮಾರಕವಾಗಿದ್ದರೆ ಮೊದಲು ಆ ನಿಯಂತ್ರಣಗಳನ್ನು ಎಲ್ಲಾ ಸಂಸ್ಥೆಗಳಿಗೂ ಅನ್ವಯವಾಗುವ ಹಾಗೆ ಪುನರ್‌ರಚಿಸಿದರೆ ಆಗ ಅದು ಸೂಕ್ತ ಕ್ರಮವಾಗುತ್ತದೆ. ಈಗ ಸರ್ಕಾರ ಮಾಡಹೊರಟದ್ದು ಏನು ಅಂದರೆ ಶ್ರೀಮಂತ ಸಂಸ್ಥೆಗಳಿಗೊಂದು ನೀತಿ, ಉಳಿದ ಸಂಸ್ಥೆಗಳಿಗೆ ಇನ್ನೊಂದು ನೀತಿ ಎಂಬ ತತ್ವವನ್ನು. ಖಾಸಗಿಯಾಗಿ ಲಭಿಸುವ ಮಾಹಿತಿ ಪ್ರಕಾರ ರಿಲಯನ್ಸ್ ಸಂಸ್ಥೆಯವರು ಅದೆಷ್ಟು ಬೃಹತ್ತಾಗಿ ಈ ಸಂಸ್ಥೆಯನ್ನು ಕಟ್ಟಲು ಹೊರಟಿದ್ದಾರೆ ಎಂದರೆ ಅವರ ಪೈಪೋಟಿ ಭಾರತದ ಯಾವುದೇ ವಿಶ್ವವಿದ್ಯಾಲಯದ ಅಥವಾ ಸಂಸ್ಥೆಯ ಜತೆಗಲ್ಲ. ವಿಶ್ವದ ಅತ್ಯುತ್ಕೃಷ್ಟ ಅಂತ ಪರಿಗಣಿಸಲಾದ ಅಮೆರಿಕದ ಹಾರ್ವರ್ಡ್ ವಿಶ್ವವಿದ್ಯಾಲಯವನ್ನೇ ಮುಂದಿನ ಹತ್ತು ವರ್ಷಗಳಲ್ಲಿ ಮಣಿಸುವುದು ಅವರ ಉದ್ದೇಶವಂತೆ. ಉನ್ನತ ಶಿಕ್ಷಣ ರಂಗದಲ್ಲಿ ಈ ರೀತಿ ಖಾಸಗಿ ಹಣ ಸವಾರಿ ಮಾಡುವುದರಿಂದ ಆಗಬಹುದಾದ ಪರಿಣಾಮಗಳ ಬಗ್ಗೆ ಸರ್ಕಾರ ನಿಗಾ ಇಡಬೇಕಾಗಿತ್ತು. ಬದಲಿಗೆ, ಸರ್ಕಾರ ಮಾಡಿದ್ದೇ ಬೇರೆ. ಅದು ಈ ಉದ್ದೇಶಿತ ಸಂಸ್ಥೆಯನ್ನು ಏಕಾಏಕಿ ತನ್ನ ನಿಯಂತ್ರಣದಿಂದಲೇ ಹೊರಗಿರಿಸಿದೆ. ಇದರ ಹಿಂದಿರಬಹುದಾದ ಇತರ ಲೆಕ್ಕಾಚಾರದ ಬಗ್ಗೆ ಜನ ಆಡಿಕೊಳ್ಳುವ ಹಾಗಾಗಿದೆ.

ಅಷ್ಟಕ್ಕೂ ಏನಿದು, ಭಾರತದ ಸಂಸ್ಥೆಗಳನ್ನು ಶತಾಯಗತಾಯ ಜಾಗತಿಕ ಉತ್ಕೃಷ್ಟ ಸಂಸ್ಥೆಗಳ ಪಟ್ಟಿಯಲ್ಲಿ ಸೇರಿಸಬೇಕು ಎನ್ನುವ ಹಟ? ಮೇಲ್ನೋಟಕ್ಕೆ ಇದೊಂದು ಉತ್ತಮ ಗುರಿ ಅಂತ ಅನ್ನಿಸಬಹುದು. ಆದರೆ ಈ ವಿಷಯವನ್ನು ಭಾರತದ ಉನ್ನತ ಶಿಕ್ಷಣ ರಂಗದ ಈಗಿನ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಪರಿಶೀಲಿಸಬೇಕು. ಸದ್ಯ ಈ ಕ್ಷೇತ್ರವನ್ನು ಕಾಡುತ್ತಿರುವ ಅಸಮಾನತೆ, ಅಸಮತೋಲನ, ಗುಣಮಟ್ಟದ ಕುಸಿತ ಹೇಗಿದೆ ಎಂದರೆ ಅದು ಇಡೀ ದೇಶದ ಭವಿಷ್ಯವನ್ನೇ ಮಂಕಾಗಿಸುವಷ್ಟಿದೆ. ಅಲ್ಲೊಂದು ಇಲ್ಲೊಂದು ಉತ್ಕೃಷ್ಟ ಸಂಸ್ಥೆಯನ್ನು ಕಟ್ಟಿ ಬೆಳೆಸುವುದು– ಅವುಗಳ ಪ್ರಸಿದ್ಧಿಯ ನೆರಳಲ್ಲಿ ಇಡೀ ಉನ್ನತ ಶಿಕ್ಷಣ ಕ್ಷೇತ್ರದ ಬಿಕ್ಕಟ್ಟನ್ನು ಮರೆಮಾಚಿಬಿಡುವುದು ಬಹಳ ಕಾಲದಿಂದ ಭಾರತದ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ನಡೆಯುತ್ತಿರುವ ವಿದ್ಯಮಾನ. ಬೇರೆಲ್ಲಾ ವಿಷಯ ಹಾಗಿರಲಿ. ಈ ದೇಶದ ಬಹುತೇಕ ಸರ್ಕಾರಿ ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ಪೂರ್ಣಪ್ರಮಾಣದ ಶಿಕ್ಷಕರ ಸಂಖ್ಯೆ ಶೇಕಡ ಐವತ್ತರಷ್ಟೂ ಇಲ್ಲ. ಉಳಿದಂತೆ ಅರೆಕಾಲಿಕ ಪ್ರಾಧ್ಯಾಪಕರೇ ಪಾಠಪ್ರವಚನ ನಡೆಸುತ್ತಿರುವುದು. ಇದರಿಂದಾಗಿ ಉನ್ನತ ಶಿಕ್ಷಣ ವ್ಯವಸ್ಥೆಯೇ ಕುಸಿದಿದೆ. ಸದಾ ಸೇವಾ ಅಭದ್ರತೆ ಮತ್ತು ಚಿಕ್ಕಾಸು ವೇತನಕ್ಕೆ ದುಡಿಯುವ ಈ ಆಧುನಿಕ ಗುಲಾಮಗಿರಿಗೆ ಬಹುಪಾಲು ಮಕ್ಕಳ ಭವಿಷ್ಯವನ್ನು ಒಪ್ಪಿಸಿ ಎಲ್ಲೋ ಒಂದೆರಡು ಸಂಸ್ಥೆಗಳನ್ನು ಜಾಗತಿಕ ಮಟ್ಟಕ್ಕೆ ಏರಿಸಿದರೆಷ್ಟು ಬಿಟ್ಟರೆಷ್ಟು!

ಕೆಲವೊಂದು ಬಿಕ್ಕಟ್ಟುಗಳ ಬಗ್ಗೆ ಎಲ್ಲರೂ ಮಾತನಾಡುತ್ತಾರೆ. ಇನ್ನು ಕೆಲವು ಬಿಕ್ಕಟ್ಟುಗಳು ಮಾತಿಗೂ ವಸ್ತುವಾಗುವುದಿಲ್ಲ. ಕೃಷಿ ಕ್ಷೇತ್ರದ ಬಿಕ್ಕಟ್ಟು ದೊಡ್ಡ ಚರ್ಚೆಯ ವಿಷಯ. ಕೃಷಿಯಷ್ಟೇ ಬಿಕ್ಕಟ್ಟು ಎದುರಿಸುತ್ತಿರುವ ಉನ್ನತ ಶಿಕ್ಷಣ ಕ್ಷೇತ್ರದ ಬಗ್ಗೆ ದಿವ್ಯ ಮೌನ ಆವರಿಸಿಬಿಟ್ಟಿದೆ. ಅಥವಾ ಎಲ್ಲವೂ ಸರಿಯಾಗಿದೆ ಅಂತ ಸಮಸ್ಯೆಯನ್ನು ಸಾರಿಸಿಬಿಡಲಾಗುತ್ತಿದೆ. ನಿಜಕ್ಕೂ ಈ ಎರಡೂ ಕ್ಷೇತ್ರಗಳ ಬಿಕ್ಕಟ್ಟನ್ನು ಒಟ್ಟೊಟ್ಟಿಗೆ ಇರಿಸಿ ನೋಡುವ ಅಗತ್ಯವಿದೆ. ಯಾಕೆಂದರೆ ಕೃಷಿಯ ಬಿಕ್ಕಟ್ಟು ಅಂತ್ಯಗೊಳಿಸಲು ವ್ಯವಸಾಯದ ಮೇಲಿನ ಅವಲಂಬನೆ ತಪ್ಪಿ ಜನ ಇತರ ಕ್ಷೇತ್ರಗಳಲ್ಲಿ ಜೀವನ ಕಂಡುಕೊಳ್ಳಬೇಕು. ಹೀಗಾಗಬೇಕಾದರೆ ಉನ್ನತ ಶಿಕ್ಷಣ ರಂಗ ಶಕ್ತವಾಗಿರಬೇಕು.

ಕೃಷಿಯ ಸಮಸ್ಯೆ ಹೇಗೂ ಸಮಸ್ಯೆಯೇ, ಅದಕ್ಕೆ ಪರಿಹಾರವಾಗಬಹುದಾದ ಉನ್ನತ ಶಿಕ್ಷಣ ರಂಗವೂ ಸಮಸ್ಯೆಗಳ ಆಗರವೇ ಆಗುತ್ತಿದೆ. ರೈತರು ಬೆಳೆದ ಕೃಷಿ ವಸ್ತುಗಳಿಗೆ ಬೆಲೆ ಇಲ್ಲ ಅಂತ ಅವುಗಳನ್ನು ಅವರು ಬೀದಿಯಲ್ಲಿ ಸುರಿದು ಪ್ರತಿಭಟಿಸಿದಾಗ ಕಡೇಪಕ್ಷ ಪತ್ರಿಕೆಗಳಲ್ಲಾದರೂ ಫೋಟೊ ಬರುತ್ತದೆ. ಅದೇ ವೇಳೆ ಒಂದು ಕಾಲದಲ್ಲಿ ಬೇಕಾಬಿಟ್ಟಿಯಾಗಿ ಸ್ಥಾಪನೆಯಾದ ಎಂಜಿನಿಯರಿಂಗ್ ಕಾಲೇಜುಗಳು ಸೀಟುಗಳು ಭರ್ತಿಯಾಗದೆ ಮುಚ್ಚಿಹೋಗುತ್ತಿವೆ. ಕಾಲೇಜುಗಳಿಂದ ಮತ್ತು ವಿಶ್ವವಿದ್ಯಾಲಯಗಳಿಂದ ಹೊರಬರುತ್ತಿರುವವರ (ಎಂಜಿನಿಯರಿಂಗ್ ಪದವೀಧರರೂ ಸೇರಿದಂತೆ) ಉದ್ಯೋಗಾರ್ಹತೆ ವರ್ಷದಿಂದ ವರ್ಷಕ್ಕೆ ಕುಸಿಯುತ್ತಿದೆ. ಇದು ನಿರುದ್ಯೋಗದ ಸಮಸ್ಯೆಯಲ್ಲ. ಅದು ಬೇರೆ. ಇದು, ಇರುವ ಉದ್ಯೋಗಗಳಿಗೆ ಪದವಿ ಪಡೆದವರನ್ನು ನೇಮಿಸಲಾಗದ ಸಮಸ್ಯೆ.

ಆದರೆ ಇವುಗಳ ಬಗ್ಗೆ ಯಾರೂ ಚರ್ಚಿಸುವುದಿಲ್ಲ. ಈ ವಿಚಾರಗಳೆಲ್ಲಾ ಚುನಾವಣಾ ಪ್ರಣಾಳಿಕೆಗಳಲ್ಲಿ ಸೇರಿದರೂ ಅವುಗಳನ್ನು ಹಾರ ಹಿಡಿದು ಯಾರೂ ಬೆಂಬತ್ತುವುದಿಲ್ಲ. ಆದರೆ ಸದ್ಯದಲ್ಲೇ ನಾವು ಜಾಗತಿಕ ಶ್ರೇಷ್ಠ ಉನ್ನತ ಶಿಕ್ಷಣ ಸಂಸ್ಥೆಗಳ ಪೈಕಿ ಒಂದೆರಡು ಭಾರತೀಯ ಸಂಸ್ಥೆಗಳ ಹೆಸರುಗಳನ್ನೂ ನೋಡಬಹುದು. ಜಾಗತಿಕ ಮಟ್ಟದ ಭಾರತೀಯ ಸಂಸ್ಥೆಗಳಲ್ಲಿ ಕಲಿತ ಮಕ್ಕಳು ಯಥಾಪ್ರಕಾರ ಅಮೆರಿಕಕ್ಕೋ ಯುರೋಪಿಗೋ ವಿಮಾನ ಹತ್ತುತ್ತಾರೆ. ಈ ದೇಶದ ಉನ್ನತ ಶಿಕ್ಷಣ ಸಂಸ್ಥೆಗಳ ಕತೆ ಹೀಗೇ ಮುಂದುವರಿದರೆ ಮುಂದೊಂದು ದಿನ ಇಲ್ಲಿ ನೆಟ್ಟಗೆ ದುಡಿಯಬಲ್ಲ ಒಬ್ಬ ಗುಮಾಸ್ತನನ್ನು ನೇಮಿಸುವುದಕ್ಕೂ ಕಷ್ಟವಾದೀತು.